ಸಿಸಿ ನಂ. **1006/2017,** ಪಿ.**ಡಬ್ಲ್ಯೂ:1**

**ದಿನಾಂಕ:12-11-2024** ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದದುವರೆದ ಪಾಟೀ ಸವಾಲು: **1** ನೇ ಆರೋಪಿ ಪರ ವಕೀಲರಿಂದ:

2010 ರಿಂದ 2014 ರವರೆಗೆ ಹಲವಾಗಲಿ ಗ್ರಾಮದ ಅಂಚೆ ಕಚೇರಿಗೆ ಎನ್ ಅರ್ ಇ ಜಿ ಯೋಜನೆಯಾಡಿ ಒಟ್ಟು ಎಷ್ಟು ಹಣ ಮಂಜೂರು ಆಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಹಲವಾಗಲಿ ಅಂಚೆ ಕಚೇರಿಯ ಫಲಾನುಭವಿಗಳ ಖಾತಾ ಸಂಖ್ಯೆಯನ್ನು ಹೇಳಲು ಈಗ ನೆನಪಿಲ್ಲ ಅದರೇ ಸದರಿ ಖಾತೆಯನ್ನು ನೋಡಿದರೇ ಹೇಳುತ್ತೇನೆ ಎಂದು ನುಡಿಯುತ್ತಾರೆ. ಸದರಿ ಖಾತೆಗಳನ್ನು ವಿಚಾರಿಸುವ ಸಮಯದಲ್ಲಿ ಫಲಾನುಭವಿಗಳನ್ನು ವಿಚಾರಿಸಿ ಸಹಿ ಪಡೆದಿರುತ್ತೇನೆ. ಸದರಿ ದಾಖಲೆಗಳನ್ನು ನನ್ನ ಮೇಲಾಧಿಕಾರಿಗೆ ನೀಡಿರುತ್ತೇನೆ. ನಾನು ಸದರಿ ಅಂಚೇ ಕಚೇರಿಗೆ ಭೇಟಿ ನೀಡುವ ಸಮಯದಲ್ಲಿ ತೆಗೆದುಕೊಂಡು ಹೋಗಿದ್ದ ಅಕೌಂಟ್ ಸ್ಟೇಟ್ ಮೆಂಟ್ ಗಳು ಎಷ್ಟು ಇದ್ದವು ಎಂದು ಈಗ ನೆನಪಿಲ್ಲ ಆದರೇ, ನಾನು ಲಿಸ್ಟ್ ಅಫ್ ಅಕೌಂಟ್ ತೆಗೆದುಕೊಂಡು ಹೋಗಿದ್ದೇನು ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನನ್ನ ಮೇಲಾಧಿಕಾರಿಳಿಗೆ ನೀಡಿದ್ದು, ತನಿಖಾಧಿಕಾರಿಗೆ ನೀಡಿರುವ ಕುರಿತು ನನಗೆ ಗೊತ್ತಿಲ್ಲ.

2. ಸದರಿ ಅಂಚೇ ಕಚೇರಿಯಲ್ಲಿ ಒಟ್ಟು ಎಷ್ಟು ಖಾತೆಗಳು ಎನ್ ಅರ್ ಇ ಜಿ ಯೋಜನೆಯಾಡಿ ಇವೆ ಎಂದು ಗೊತ್ತಿಲ್ಲ ಅದರೇ ಅದರೇ ಲಿಸ್ಟ್ ಅಫ್ ಅಕೌಂಟ್ ನಲ್ಲಿ ಇರುತ್ತವೆ. ಫಲಾನುಭವಿಗಳು ನನಗೆ ಯಾವುದೇ ದೂರನ್ನು ನೀಡಿರುವುದಿಲ್ಲ. 1 ನೇ ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಅತನ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅತನಿಗೂ ಮತ್ತು ಮೇಲಾಧಿಕಾರಿಗೂ ವೈಮನಸ್ಸು ಇದ್ದ ಕಾರಣ ಸುಳ್ಳು ದೂರನ್ನುನೀಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆಸರಿಯಲ್ಲ. ನಾನು ಹಲವಾಗಲಿ ಗ್ರಾಮ ಅಂಚೇ ಕಚೇರಿಗೆ ಬೇಟಿ ನೀಡಿರುವುದಿಲ್ಲ ಯಾವುದೇ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

**ಹೆ. ಜೆ ಎಂ ಎಫ್ ಸಿ ಕೊಪ್ಪಳ.**